# ಡಿಸೆಂಬರ್, 2017 - ತಾಳೆ ಬೆಳೆ ಕೃಷಿಗೆ ಸೂಕ್ತ ಸಲಹೆಗಳು

- ತಾಳೆ ತೋಟದಲ್ಲಿ ಅಂತರ ಬೆಳೆ ಬೇಸಾಯ ಕೈಗೊಳ್ಳುವ ಸಂದರ್ಬದಲ್ಲಿ ತಾಳೆ ಸಸಿಗಳಿಗೆ ಮತ್ತು ಅಂತರಬೆಳೆಗೆ ಶಿಫಾರಸ್ಸು ಮಾಡಿರುವಂತೆ ಪ್ರತ್ಯೇಕ ಪ್ರಮಾಣದ ಗೊಬ್ಬರವನ್ನು ನೀಡುವುದು.

- ಬೋರಾನ್ ಕೊರತೆ ಲಕ್ಷಣಗಳು ಮತ್ತು ನಿರ್ವಹಣೆ: ಲಕ್ಷಣಗಳು - ಬೋರಾನ್ ಕೊರತೆ ಉಂಟಾದಾಗ ತಾಳೆ ಗರಿಗಳ ತುದಿಯ ಕೊಕ್ಕಿಯಾಕಾರದಲ್ಲಿ ಬಾಗುತ್ತದೆ ಮತ್ತು ಮೀನಿನ ಅಸ್ತಿ ಪಂಜರದಂತೆ ಕಾಣುತ್ತದೆ. ಬೋರಾನ್ ಕೊರತೆಯನ್ನು ನಿವಾರಿಸಲು ಪ್ರತಿ ಗಿಡಕ್ಕೆ 100 ಗ್ರಾಂ ಬೋರಾಕ್ಸ್ ನ್ನು ಮಣ್ಣು ಮತ್ತು ಎಲೆಗಳ ಪರೀಕ್ಷೆಗಳನ್ನು ಆಧಾರಿಸಿ ನೀಡಬೇಕು.

- ತಾಳೆ ಬೇಸಾಯದಲ್ಲಿ ನಿಷೆಧಿಸಲಾದ ರಾಸಾಯನಿಕಗಳು: ತಾಳೆ ಬೇಸಾಯದಲ್ಲಿ ಕಳ ನಾಶಕಗಳಾದ 2.4-ಡಿ ಮತ್ತು 2.4.5-ಟಿ ಹಾಗೂ ತಾಮ್ರವನ್ನೊಳಗೊಂಡ ರಾಸಾಯನಿಕಗಳನ್ನು ಬಳಸಬಾರದು. ಈ ರಾಸಾಯನಿಕಗಳಿಂದ ತಾಳೆ ಗಿಡಗಳಿಗೆ ದುಷ್ಪರಿಣಾಮಗಳು ಉಂಟಾಗುತ್ತದೆ.

- ಸಂಚಿ ಹುಳುಗಳ ಬಾಧೆ ಮತ್ತು ನಿರ್ವಹಣೆ: ತಾಳೆ ಗಿಡಗಳ ಗರಿಗಳ ಕೆಳ ಭಾಗದಲ್ಲಿ ಸಂಚಿ ಹುಳುಗಳ ಗೂಡುಗಳು ನೇಥಾಡುತ್ತಿರುವುದು. ಇವು ಎಲೆಗಳನ್ನು ತಿನ್ನುತ್ತದೆ. ಅತಿಯಾದ ಹವಳಿಯಿದ್ದಲ್ಲಿ ಹುಳುಗಳು ಹೆಚ್ಚಿರುವ ಗರಿಗಳನ್ನು ಕತ್ತರಿಸಿ ಸುಡಬೇಕು. ಮೋನೊಕ್ರೊಟೋಫಾಸ್ ನ್ನು (10 ಮಿ.ಲೀ) 10 ಮಿ.ಲೀ ನೀರಿನಲ್ಲಿ ಸೇರಿಸಿ ಬೇರುಗಳ ಮೂಲಕ ನೀಡಬೇಕು.

- ಸುಳಿ ಕೊಳೆ ರೋಗದ ನಿಯಂತ್ರಣಕ್ಕಾಗಿ ಶೇ.1ರ ಬಾವಿಸ್ಟಿನ್ ದ್ರವಣವನ್ನು ತಾಳೆ ಸಸಿಗಳ ಸುಳಿಯಲ್ಲಿ ಹಾಕಬೇಕು. ಈ ಕ್ರಮವನ್ನು ಮಳೆಗಾಲಕ್ಕೆ ಮೊದಲು ಮತ್ತು ಮಳೆಗಾಲದ ನಂತರ ಮಾಡಬೇಕು.

- ಕಾಂಡ ಕೊಳೆ ರೋಗ ಪೀಡಿತ ತಾಳೆ ಗಿಡಗಳ ಬಲಿತ ಗರಿಗಳು ದಟ್ಟ ಕಂದು ಅಥವಾ ಚಾಕೋಲೇಟ್ ಬಣ್ಣಕ್ಕೆ ತಿರುಗಿ ಒಣಗುತ್ತದೆ. ರೋಗ ಅತಿಯಾದ ಸಂದರ್ಭಗಳಲ್ಲಿ ಈ ಲಕ್ಷಣಗಳು ಎಳೆಯ ಗರಿಗಳಲ್ಲೂ ಕಂಡು ಬಂದು ಗಿಡಗಳು ಸಾಯುತ್ತದೆ.

- ಕಾಂಡ ಕೊಳೆ ರೋಗವನ್ನು ದೃಢ ಪಡಿಸಲು ಚೂಪಾದ ಕಬ್ಬಿಣದ ಸಲಾಕೆಯನ್ನು ರೋಗ ಗ್ರಸ್ಥ ತಾಳೆ ಗಿಡದ ಬುಡದಲ್ಲಿ ತಿವಿದಾಗ ಕೆಟ್ಟ ವಾಸನೆಯ ದ್ರವವು ಹೊರಬರುತ್ತದೆ.